SRI M. MALLIKARJUNA SWAMY (Minister for Eduction) [on behalf on Sri H. M. Channabasappa (Minister for Public Works and Electricity)].—

(*a*) No.

(*b*) Does not arise in view of reply to clause (*a*) above.

ಶ್ರೀ ಟಿ. ಎಂ. ಮಂಜುನಾಥ್.– ಇಲ್ಲಿ ಮಾನ್ಯ ಸಚಿವರು ಕೊಟ್ಟಿರತಕ್ಕ ಉತ್ತರ ವಾಸ್ತವಾಂಶಕ್ಕೆ ದೂರವಾದುದ್ದು. ಅಲ್ಲಿ ಈ ಕೆಲಸದ ಅಂದಾಜುಗಳೆಲ್ಲಾ ತಯಾರಾಗಿ ಸರ್ಕಾರಕ್ಕೆ ಬಂದು ಅವು ಬಡ್ಜೆಟ್ಟಿನಲ್ಲಿ ಸೇರತಕ್ಕ ಹಂತದಲ್ಲಿ ನಿಂತಿರುತ್ತವೆ. ಆದುದರಿಂದ ಮಾನ್ಯ ಸಚಿವರು ಮತ್ತೊಮ್ಮೆ ಈ ವಿಷಯವನ್ನು ಪರಿಶೀಲನೆ ಮಾಡಿ ತಿಳಿಸುತ್ತಾರೆಯೇ ?

† ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ — ನಾನು ಹಾಗೆ ಹೇಳುವುದಕ್ಕೂ ಕಾರಣಗಳಿವೆ ತಿಪಟೂರು ತಾಲ್ಲೂಕಿನಲ್ಲಿ ಹುಣಸೇಗಟ್ಟ ರಸ್ತೆಯಲ್ಲಿ ಗಂಗನಹಳ್ಳಿಯ ಬಳಿ ಒಂದು ಹಳ್ಳಕ್ಕೆ ಸೇತುವೆಯನ್ನು ಹಾಕಲು ೨ ಲಕ್ಷ ೫೬ ಸಾವಿರ ರೂಪಾಯಿಗಳಿಗೆ ಒಂದು ಎಸ್ಟಿಮೇಟ್ ತಯಾರಾಗಿ ತುಮಕೂರು ಎಗ್ಜಿಕ್ಯುಟೀವ್ ಇಂಜಿನಿಯರಿಂದ ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಬಂದಿತ್ತು. ಆದರೆ ಅದನ್ನು ಅವರು ಕೆಲವು ಕ್ವೆರಿ ಹಾಕಿ ಹಿಂದಕ್ಕೆ ಕಳುಹಿಸಿದ್ದಾರೆ. ಈ ಹಿಂದೆ ಇದಕ್ಕೆ ೧೯೭೪-೭೫ರ ಬಡ್ಜೆಟ್ಟಿನಲ್ಲಿ ಅವಕಾಶ ಸಿಕ್ಕಬಹುದೆಂದಿತ್ತು. ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ತಾರೀಖು ೧೭ನೇ ಜನವರಿ ೧೯೭೪ರಲ್ಲಿ ಆ ಭಾಗದಲ್ಲಿ ಸಂಚಾರ ನಡೆಸಿದಾಗ—ಜನರು ಹೇಳಿಕೊಂಡ ಆಹವಾಲಿನ ಮೇಲೆ ಅವರು ಆ ಕೆಲಸವನ್ನು ಈ ವರ್ಷವೇ ತೆಗೆದುಕೊಳ್ಳಬೇಕೆಂಪು ಅವರು ಆ ಮಿನಿಟ್ ಬುಕ್ಕಿನಲ್ಲಿ ಬರೆದಿದ್ದಾರೆ. ಆ ವಿಚಾರವಿನ್ನೂ ಸರ್ಕಾರಕ್ಕೆ ಬಂದಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.— ತುರುವೆಕೆರೆ ತಾಲ್ಲೂಕಿನ ಜನಕ್ಕೆ ಮತ್ತು ಗೆಣಸಿ ಪ್ರಾಂತ್ಯದ ಜನರಿಗೆ ಇದರಿಂದ ಪ್ರಯಾಣದ ದೂರ ಬಹಳ ಕಡಿಮೆಯಾಗುವುದರಿಂದ ಇದನ್ನು ಈ ವರ್ಷದ ಬಡ್ಜೆಟ್ಟಿನಲ್ಲಿ ಸೇರಿಸುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಂ ಮಲ್ಲಿಕಾರ್ಜುನ ಸ್ವಾಮಿ.— ಮೊದಲು ಈ ಇಲಾಖೆಗೆ ತೆಗೆದಿದ್ದ ಹಣದಲ್ಲಿ ಬಹಳ ಖೋತಾ ಆಗಿದೆ. ಅದು ೨ ಕೋಟಿ ೧೦ ಲಕ್ಷಕ್ಕೆ ಇಳಿದಿದೆ. ಆದುದರಿಂದ ಇದನ್ನು ಈ ವರ್ಷದ ಬಡ್ಜೆಟ್ಟಿನಲ್ಲಿ ತೆಗೆದುಕೂಳ್ಳುವುದಕ್ಕಾಗುವುದಿಲ್ಲ. ಮುಂದಿನ ಬಡ್ಜೆಟ್ಟಿನಲ್ಲಿ ಇದನ್ನು ಪರಿಶೀಲನೆ ಮಾಡ ಬಹುದು.

ಶ್ರೀ ಟಿ. ಎಂ. ಮಂಜುನಾಥ್.—ಆಲ್ಲಿಗೆ ಮಾನ್ಯ ಮಂತ್ರಿಗಳು ಬಂದಿದ್ದಾಗ ಜನರಿಗೆ ಆಶ್ವಾಸನೆ ಕೊಟ್ಟು ಈ ವರ್ಷವೇ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಅಲ್ಲಿನ ಅಸಿಸ್ಟೆಂಟ್ ಇಂಜಿನಿಯರಿಗೆ ಹೇಳಿದ್ದಾರೆಂದು ಆಡಳಿತ ಪಕ್ಷದ ಸದಸ್ಯರು ಪ್ರಚಾರ ಮಾಡುತ್ತಿದ್ದಾರೆ. ಆದರೆ ಇಲ್ಲಿ ಮಾಡುವುದಕ್ಕೆ ಆಗುವುದಿಲ್ಲವೆಂದು ತಾವು ಹೇಳಬಹುದೆ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಇದು ಪ್ರಶ್ನಾತೀತದ ಪ್ರಶ್ನೆ. ಈ ವರ್ಷದಲ್ಲಿ ಸಾಧ್ಯವಿಲ್ಲ ಎಂದು ಆಗಲೇ ಹೇಳಿದ್ದೇನೆ,

## CASES OF PILFERAGE IN GULBARGA DIVISION OF K.S.R.T.C.

524. SRI BAPU RAO ANANDA RAO(Basavakalyan).—

Will the Minister for Transport and Housing be pleased to state:

(*a*) whether it has come to the notice of the Government that pilferage by the staff in Gulbarga Division of K.S.R.T.C., is rampant including Humanabad Depot in Bidar District.

(*b*) if so, the steps taken to curb these activities among the staff of K.S.R.T.C.

(*c*) the number of cases booked and punishment awarded for such activities during the last one year ?

SRI K. H. RANGANATH (Minister for Transport and Housing).—

(*a*) A few cases of pilferage have been reported.

(*b*) Line checking has been intensified besides inflicting deterrent punishment against the concerned staff.

(*c*) During the year 1973

| | | | |
|---|---|---|---|
| 1. | Number of cases booked | ... | 2,006 |
| 2. | Number of cases disposed as detailed below. | ... | 1,503 |
| | (a) Dismissed | 15 | |
| | (b) Suspended | 521 | |
| | (c) Fined | 570 | |
| | (d) Warned | 397 | |

SRI BAPU RAO ANANDA RAO.—May I know the amount involved in the 2006 cases booked ?

SRI K. H. RANGANATHA.—I want notice.

SRI BAPU RAO ANANDA RAO.—In answer to (a) it is stated that a few cases of pilferage have been reported. Does the Government think that 2006 cases booked are only a few cases ?

SRI K. H. RANGANATH.—The hon. member can draw his inference

ಶ್ರೀ ಟಿ. ಆರ್. ಶಾಮಣ್ಣ.— ಬೆಂಗಳೂರಿನ ಅನೇಕ ಸಂದರ್ಭಗಳಲ್ಲಿ ಪ್ರಯಾಣೀಕರಿಗೆ ಬಸ್ ಸಿಕ್ಕುವುದೇ ಕಷ್ಟ. ಅದಕ್ಕಾಗಿ ಅನೇಕರಿಗೆ ಬಸ್ ಹತ್ತಿದ ಕೂಡಲೇ ಟಿಕೆಟ್ ತೆಗೆದುಕೊಳ್ಳುವುದಕ್ಕೆ ಆಗದೆ ಇರುವುದರಿಂದ ಅವರಿಗೆ ಕಂಡಕ್ಟರು ಬಸ್ಸನ್ನು ಇಳಿದು ಹೋಗತಕ್ಕ ಕಾಲದಲ್ಲಿ ಟಿಕೆಟ್ ಕೊಡದೆ ಗುಡ್ಡನ್ನು ತೆಗೆದುಕೊಳ್ಳುತ್ತಿರುವುದರಿಂದ ಹಣ ಜಾಸ್ತಿ ಸೋರಿ ಹೋಗುತ್ತಿದೆ. ಈ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ರಂಗನಾಥ್.—ಇಲ್ಲಿ ಈ ಉಪ ಪ್ರಶ್ನೆ ಉದ್ಭವಿಸುವುದಿಲ್ಲ

ಶ್ರೀ ಎನ್. ಜಿ. ಹಾಲಪ್ಪ.— ಎಷ್ಟು ಹಣ ಪೋಲಾಗಿದೆ ? ಅದಕ್ಕೆ ಸಂಬಂಧಪಟ್ಟಂತೆ ಬೇಜವಾಬ್ದಾರಿ ಅಧಿಕಾರಿಗಳ ಮೇಲೇನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಕೆ. ಎಚ್. ರಂಗನಾಥ್.—ಆ ಅಂಕಿಅಂಶ ನನ್ನಲ್ಲಿಲ್ಲ. ನೋಟೀಸ್ ಕೊಟ್ಟರೆ ಅಥವ ಬೇರೆ ಪ್ರಶ್ನೆ ಹಾಕಿದರೆ ತಿಳಿಸಬಹುದು.

SRI BAPURAO ANANDARAO.— Has it come to the notice of the Government that even the checking staff is involved in this ?

SRI K. H. RANGANATH.—I am not aware of the allegation made by the hon. Member. If the hon. Member has any specific case he could bring it to the notice of the Government.